## ಟಿಕ್ ಟಿಕ್ ಮರೆತ ಗಡಿಯಾರ!



ಬೆಂಗಳೂರಿನ ಉತ್ತರಹಳ್ಳಿಯ ಸಮೀಪವಿರುವ ಶ್ರೀನಿವಾಸಪುರದ ಓಂಕಾರ ಬೆಟ್ಟದ ಮೇಲೊಂದು ಬೃಹದಾಕಾರದ ಗಡಿಯಾರ ಆಕರ್ಷಿಸುತ್ತದೆ. ಏಷ್ಯಾದ ಅತಿದೊಡ್ಡ ಗಡಿಯಾರ ಗೋಪುರವೆಂಬ ಹೆಗ್ಗಳಿಕೆಗೆ ಪಾತ್ರವಾದ ಅದನ್ನು ಎಚ್‌ಎಂಟಿ ಕಂಪನಿ ವಿನ್ಯಾಸ ಮಾಡಿ ಪ್ರತಿಷ್ಠಾಪಿಸಿದೆ. ದಿನಾಂಕ 30.01.2002 ರಂದು ಓಂಕಾರ ಆಶ್ರಮದ ಅಂದಿನ ಸ್ವಾಮೀಜಿಗಳ ಜಯಂತ್ಯುತ್ಸವದ ನೆನಪಿಗಾಗಿ ಬಾಲಗಂಗಾಧರನಾಥ ಸ್ವಾಮೀಜಿ ಅದನ್ನು ಲೋಕಾರ್ಪಣೆ ಮಾಡಿದ್ದರು ಎನ್ನುವ ವಿವರವೂ ಅಲ್ಲಿದೆ. ಚಾಲನೆಯಲ್ಲಿದ್ದ ಗಡಿಯಾರ ಈಗ ಸ್ತಬ್ಧವಾಗಿದೆ.

ಗಡಿಯಾರವನ್ನು ಇಕ್ಕೆಲಗಳಲ್ಲಿ ಆತುಕೊಂಡು ನಿಂತ ಯಕ್ಷಪ್ರತಿಮೆಗಳು, ಮೇಲ್ಭಾಗದಲ್ಲಿ ಎರಡೂ ಕಡೆ ಹಿಮ್ಮುಖವಾಗಿ ಕೂತ ಗಿಳಿಗಳು, ಗಡಿಯಾರದ ಮೇಲೇರಲು ಪಕ್ಕದಲ್ಲಿಯೇ ಇರುವ ವೃತ್ತಾಕಾರದ ಕಬ್ಬಿಣದ ಏಣಿ, ಇದರ ಐತಿಹ್ಯ ಸಾರುವ ಶಿಲಾಫಲಕ ಎಲ್ಲವೂ ಈಗ ಜೀರ್ಣಾವಸ್ಥೆಯ ಹಾದಿಯಲ್ಲಿವೆ.

—ಧರ್ಮಾನಂದ ಶಿರ್ವ, ಬೆಂಗಳೂರು



## ಬೇಟೆಗಾರ ಜೇಡ

ಸಂಧಿಪದಿ ವಂಶದ ಅರ್ಯಾಕ್ನಿಡ ವರ್ಗದಲ್ಲಿ ಸುಮಾರು ನಲವತ್ತು ಸಾವಿರ ಜೇಡಗಳಿವೆ. ಈ ಜೇಡಗಳಲ್ಲಿ ವಿಚಿತ್ರ ಲಕ್ಷಣದ ಜೇಡವೊಂದಿದೆ. ಅದೇ ಬೇಟೆಗಾರ ಜೇಡ. ಇದಕ್ಕೆ ಇಂಗ್ಲಿಷ್‌ನಲ್ಲಿ ಹಂಟ್ಸಮನ್ ಸ್ಪೈಡರ್ ಎನ್ನುವರು. ಇವುಗಳ ವೇಗ ಮತ್ತು ಬೇಟೆಯ ಚಾಕಚಕ್ಯತೆಯಿಂದ ಅರ್ಯಾಕ್ನಿಡ ವರ್ಗಕ್ಕೆ ಸೇರಿಸಿದ್ದಾರೆ.

ಕಲ್ಲುಗಳ ಕೆಳಗಿನ ಸಂದಿಯಲ್ಲಿ ವಾಸಿಸುವುದರಿಂದ ದೇಹ ಚಪ್ಪಟೆಯಾಗಿರುತ್ತದೆ. ಈ ಜೇಡಕ್ಕೆ ಎಂಟು ಕಣ್ಣುಗಳಿವೆ. ಇವು ತಲಾ ನಾಲ್ಕರಂತೆ ಮುಂಭಾಗದ ಎರಡು ಸಾಲುಗಳಲ್ಲಿ ಕಂಡುಬರುತ್ತವೆ. ಪ್ರೌಢ ಬೇಟೆಗಾರ ಜೇಡಗಳು ಬಲೆಯನ್ನು ನೇಯುವುದಿಲ್ಲ. ಬೇಟೆಯನ್ನು ನಿಷ್ಕ್ರಿಯಗೊಳಿಸಲು ವಿಷವನ್ನು ಚುಚ್ಚುತ್ತವೆ. ಅವು ಜಿರಲೆಗಳು, ಕೀಟ, ಹುಳುಗಳನ್ನು ಸೇವಿಸುತ್ತವೆ.

—ಪ್ರಕಾಶ ಎಸ್. ಮನ್ನಂಗಿ



## ಸೌತೆ ಬೀಜದ ಸಾಲು!

ಪ್ರಕೃತಿಯಲ್ಲಿ ಏನೆಲ್ಲ ಕುತೂಹಲ– ಸೋಜಿಗದ ವಿಷಯಗಳಿವೆ ಎನ್ನುವುದು ನಮ್ಮ ಊಹೆಗೂ ನಿಲುಕದು ಅಲ್ಲವೇ? ಬೆಳ್ಳಂಬೆಳಗ್ಗೆ ಎಳುತ್ತಿದ್ದಂತೆ ಜಗಲಿಯಲ್ಲಿ ಸೌತೆ ಬೀಜ ಬಿತ್ತಿ ಅಂತೆ ಕಂಡುಬಂದಿದ್ದು ಇರುವೆಗಳು ಬೀಜವನ್ನು ಎತ್ತಿಕೊಂಡು ಹೋಗುತ್ತಿದ್ದಂತೆ ಭಾಸವಾಯಿತು. ದಿಟ್ಟಿಸಿ ನೋಡಿದಾಗ ಅವು ಗೆದ್ದಲು ಎಂದು ತಿಳಿದು ಅಚ್ಚರಿಯೂ ಆಯಿತು. ಯಾವ ಹುತ್ತದಲ್ಲಿ ಯಾವ ಹಾವಿದೆ ಎಂದು ಹೇಗೆ ಹೇಳಲು ಸಾಧ್ಯವಿಲ್ಲವೋ ಹಾಗೆಯೇ ಗೆದ್ದಲ್ಲಿನಲ್ಲಿಯೂ ಹಲವು ಬಗೆ. ಈ ಬೀರು ಬೇಸಿಗೆಯಲ್ಲಿ ರೆಕ್ಕೆ ಬಂದು ಹೊರ ಹಾರಾಡುತ್ತವೆ ಸಂಜೆ ಬೆಳಕಿಗೆ ಬಂದು ರೆಕ್ಕೆ ಬಿದ್ದು ನಾಶವಾಗುತ್ತವೆ. ಇನ್ನು ಕೆಲವು ಕೇಸರಿ ಇರುವೆ ಆಗುತ್ತದೆ ಮರ ಗೆದ್ದಲು ಹೀಗೆ ಸೌತೆ ಬೀಜದಂತಿರುವ ಈ ಗೆದ್ದಲು ಅಪರೂಪವೇ ಸರಿ ಇದು ನೋಡಲು ಲಕ್ಷ್ಮಣರೇಖೆ ಹೇಳಿದಂತೆ ಕಾಣುತ್ತದೆ.

—ನಂದನ್ ಕುಮಾರ್ ಪೆರ್ನಾಜೆ, ಪುತ್ತೂರು